**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ**

**ಕೆ ಆರ್ ನಗರ.**

**ಸಿ.ಸಿ. ನಂ. 84 /2026**

ಪಿರ್ಯಾದಿ ಃ ಸರ್ಕಾರದ ಪರ ಕೆ ಆರ್ ನಗರ ಪೋಲೀಸ್ ಠಾಣೆ

ಃವಿರುದ್ಧ ಃ

ಆರೋಪಿ ಃ ಲಕ್ಷ್ಮೀಕಾಂತ ಎನ್ ಬಿನ್ ನಾರಾಯಣರಾವ್
24 ವರ್ಷ
ವಾಸಃ#11/168, ಕ್ರಾಸ್ ನಂ. 7,
ಪಾಂಡುರಂಗ ದೇವಸ್ಥಾನ
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದೋಷಾರೋಪಣೆ**

ಶ್ರೀ ಚಂದನ್.ಎಸ್ ಬಿ.ಕಾಮ್.,ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 14-12-2025 ರಂದು ಮದ್ಯಾಹ್ನ 12.00 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೊಲೀಸ್ ಠಾಣಾ ಸರಹದ್ದನಲ್ಲಿ ಹಾದು ಹೋಗುವ ರಸ್ತೆಯಲ್ಲಿ ಆರೋಪಿಯಾದ ನೀವು ಚಾಸಾ-12 ಸುನೀತಾರವರಿಗೆ ಸೇರಿದ ವಾಹನ ಸಂಖ್ಯೆ ಕೆಎ-09-ಎಂ ಎಫ್ 6399 ಇನ್ನೊವಾ ಕ್ರಿಸ್ಟಾ ಕಾರನ್ನು ಯಾವುದೇ ಮುನ್ಸೂಚನೆಯನ್ನು ನೀಡದೆ ಸಡನ್ ಕಾರಿನಿಂದ ಇಳಿಯಲು ಕಾರಿನ ಬಲ ಭಾಗದ ಡೋರ್ ನ್ನು ತೆಗೆದಿದ್ದರಿಂದ ರಸ್ತೆಯಲ್ಲಿ ಬರುತ್ತಿದ್ದ ಚಾಸಾ-3 ಗಿರೀಶ ಎಸ್ ಎಚ್ ರವರ ವಾಹನ ಸಂಖ್ಯೆ ಕೆಎ-09-ಕೆಎ-3960 ಹೀರೋ ಸ್ಲಂಡರ್ ಮೋಟಾರ್ ಬೈಕಿನಲ್ಲಿ ಚಾಸಾ-2 ರವರನ್ನು ಹಿಂದೆ ಕೂರಿಸಿಕೊಂಡು ಬರುತ್ತಿರುವಾಗ ಆರೋಪಿಯಾದ ನೀವು ಕಾರಿನ ಡೋರ್ ನ್ನು ತೆಗೆದಿದ್ದರಿಂದ ಹಿಂದೆ ಕುಳಿತಿದ್ದ ಚಾಸಾ-2 ರವರು ರಸ್ತೆಗೆ ಬಿದ್ದು ಅಪಘಾತವಾಗಿರುತ್ತದೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಕೆಎ-09-ಎಂ ಎಫ್ 6399 ಇನ್ನೊವಾ ಕ್ರಿಸ್ಟಾ ಕಾರನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ

ಚಾಲನೆ ಮಾಡಿದ್ದರಿಂದ ಚಾಸಾ-3 ರವರ ಹಿಂದೆ ಕುಳಿತಿದ್ದ ಚಾಸಾ-2 ರವರ ತಲೆಯ ಹಿಂಭಾಗ, ಮೈ ಕೈಗೆ ಸಣ್ಣಪುಟ್ಟ ನೋವು ಉಂಟಾಗಿ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಬಿ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಪ್ರ: 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷಾರೋಪಣೆ ಅರ್ಥವಾಯಿತೇ?
ಉ: ಅರ್ಥವಾಯಿತು

ಪ್ರ: 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?
ಉ: ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿ: 10-02-2026

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.

**ಆರೋಪಿಯ ಸಹಿ:**